ಶ್ರೀ ರಾಮಕೃಷ್ಣ ಹೆಗ್ಗಡೆ.—ಆಡಿಟ್ ರಿಪೋರ್ಟ್ ಬಂದ ಮೇಲೆ ಅದರ ಮೇಲೆ ಕ್ರಮ ತೆಗೆದು ಕೊಂಡ ನಂತರ ಯಾವ ಪರಿಣಾಮವಾಗಿದೆ ಎನ್ನುವುದು ಗೊತ್ತಿಲ್ಲ. ಇನ್ನು ಮುಂದೆ ಆ ರೀತಿಯ ದೋಷ ಆಗದ ಹಾಗೆ ನೋಡಿಕೊಳ್ಳುತ್ತೇವೆ.

Officials lent to M.S.R.T.C.

* *Q.*—648. **Sri J. L. KABADI** (Baradol).—

Will the Government be pleased to state:—

(*a*) whether it is not a fact that the General Manager and Chief Accounts Officer should be only lent officials to M.S.R.T.C. as per Act;

(*b*) why the Government have given more hands to M.S.R.T.C. other than the above persons and how many in each section?

A.—**Sri D. DEVARAJ URS** (Minister for Labour, Housing and Transport).—

(*a*) Under Section 14 (1), Chapter 2 of the Road Transport Corporation Act, 1950, (64 of 1950) General Manager and the Chief Accounts Officer of the Corportation are to be appointed by the State Government;

(*b*) The act does not prevent taking any officer from the State Government on deputation in the interest of work. The number of lent officers now working are.—

Secretarial Section ...	1
Security Section ...	1
Accounts Section ...	7
Civil Engineering Section ...	19

†ಶ್ರೀ ಡಿ.ದೇವರಾಜ ಅರಸ್.—ಅಚ್ಚಾದ ಉತ್ತರದಲ್ಲಿ (ಬ) ಭಾಗಕ್ಕೆ ಕೊಟ್ಟಿರುವುದರ ಜೊತೆಗೆ ಇಬ್ಬರು ಅಧಿಕಾರಿಗಳನ್ನು ಸರ್ಕಾರದಿಂದ ಕಾರ್ಪೊರೇಷನ್ನಿಗೆ ತೆಗೆದುಕೊಂಡಿದ್ದೇವೆ ಎಂದು ಸೇರಿಸಿ ಕೊಳ್ಳಬೇಕು.

ಶ್ರೀ ಜೆ. ಎಲ್. ಕಬಾಡಿ.—ಕಾರ್ಪೊರೇಷನ್ನಿಗೆ ತೆಗೆದುಕೊಂಡಿರುವ ಅಧಿಕಾರಿಗಳನ್ನು ಯಾವ ಯಾವ ಇಲಾಖೆಗಳಿಂದ ತೆಗೆದುಕೊಂಡಿದ್ದೀರಿ?

ಶ್ರೀ ಡಿ.ದೇವರಾಜ ಅರಸ್.—ಅಕೌಂಟ್ಸ್ ಸೆಕ್ಷನ್ನಿಗೆ 7 ಜನರನ್ನು ಸರ್ಕಾರದ ಅಕೌಂಟ್ಸ್ ಸೆಕ್ಷನ್ನಿನಿಂದ ತೆಗೆದುಕೊಂಡಿದ್ದೇವೆ, ಸೆಕ್ಯೂರಿಟಿ ಸೆಕ್ಷನ್ನಿಗೆ ಪೋಲೀಸು ಇಲಾಖೆಯಿಂದ ಒಬ್ಬ ಅಧಿಕಾರಿಯನ್ನು ತೆಗೆದುಕೊಂಡಿದ್ದೇವೆ, ಸಿವಿಲ್ ಇಂಜಿನಿಯರಿಂಗ್ ಸೆಕ್ಷನ್ನಿಗೆ ಲೋಕೋಪಯೋಗಿ ಶಾಖೆಯಿಂದ ತೆಗೆದು ಕೊಂಡಿದ್ದೇವೆ.

Sri J.P. SARWESH.—Sir, what is the minimum pay that the officers daw in their parent departments and what is the pay they are drawing now?

Mr. SPEAKER.—Is it not too big a question?

ಶ್ರೀ ಜೆ. ಎಲ್. ಕಬಾಡಿ.—ಸೆಕ್ರೆಟೇರಿಯಲ್ ಸೆಕ್ಷನ್ನಿಗೆ ಯಾವ ಇಲಾಖೆಯಿಂದ ತೆಗೆದು ಕೊಂಡಿದ್ದೀರಿ?

ಶ್ರೀ ಡಿ.ದೇವರಾಜ ಅರಸ್.—ಅವರನ್ನು ರೆವೆನ್ಯೂ ಇಲಾಖೆಯಿಂದ ತೆಗೆದುಕೊಂಡಿದ್ದೇವೆಂದು ಕಾಣುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಈಗ ಡಿವಿಜನಲ್ ಕಂಟ್ರೋಲರ್ ಹತ್ತಿರ ಕೆಲಸ ಮಾಡತಕ್ಕ ಜನರು ಆರ್. ಟಿ. ಒ. ಆಫೀಸಿನಿಂದ ಬಂದದ್ದು ಹೌದೋ ಅಲ್ಲವೊ?

ಶ್ರೀ ಡಿ. ದೇವರಾಜ ಅರಸ್.—ಅವರೆಲ್ಲ ಇಂಟಿಗ್ರೇಷನ್ ಆದಾಗ ಬಂದ ಅಧಿಕಾರಿಗಳು ಯಾವ ಆಫೀಸಿನಿಂದ ಬಂದವರು ಎನ್ನುವುದು ಗೊತ್ತಿಲ್ಲ.

ಶ್ರೀ ಜೆ: ಎಲ್. ಕಬಾಡಿ.—ಈಗ ಕಾರ್ಪೊರೇಷನ್ನಿನಲ್ಲಿರುವ ಅಧಿಕಾರಿಗಳಲ್ಲಿ ಚೆಕ್ನಿಕಲ್ ನಕ್ಷನ್ನಿನಲ್ಲಿ ಯಾವುದೂ ಗೊತ್ತಿಲ್ಲದೇ ಇರುವವರು ಎಷ್ಟು ಜನರಿದ್ದಾರೆ?

(ಉತ್ತರವಿಲ್ಲ.)

Appointment of Village Accountant—cum—V.P. Secretaries in Shimoga District.

* *Q.*—649. Sri V. S. LAKSHMIKANTHAPPA (Sagar).—

Will the Government be pleased to state:—

(*a*) the number of people that are trained and appointed as Village Accountants—*cum*—V.P. Secretaries in Shimoga District (taluk-wise figures may be furnished):

(*b*) the agency that has been empowered to disburse the salary for such officials and since when?

A.—Sri M. V. KRISHNAPPA (Minister for Revenue).—

(*a*) 191 as per details shown below:—

1.	Shimoga	16
2.	Bhadravathi	10
3.	Sagar	23
4.	Shikaripur	22
5.	Honnali	27
6.	Hosanagar	10
7.	Thirthally	33
8.	Channagiri	32
9.	Sorab	18

The Deputy Commissioner is the drawing officer and the Tahsildars are the disbursing officers.

(*b*) Since November 1962.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಸರ್ಕಾರದಿಂದ ಈ ನೌಕರರಿಗೆ ಗೊತ್ತುಪಡಿರುವ ಸಂಬಳ ಬಹಳಕಡಮೆಯಾಗಿರುವುದರಿಂದ ಅವರು ಬೇಕಾದಷ್ಟು ಸಂಖ್ಯೆಯಲ್ಲಿ ಬರದೆ ಅನೇಕ ಪಂಚಾಯತಿಗಳಿಗೆ ಕಾರ್ಯದರ್ಶಿಗಳಿಲ್ಲದೆ ಬಹಳ ತೊಂದರೆಯಾಗಿರುವುದನ್ನು ತಪ್ಪಿಸಲು ಸರ್ಕಾರ ಏನು ಪರಿಹಾರ ಕ್ರಮ ತೆಗೆದುಕೊಂಡಿದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗೆ 65 ರೂಪಾಯಿ ಸಂಬಳ ನಿಗದಿ ಮಾಡಿ ಕನಿಷ್ಟ ಅರ್ಹತೆ ಎಸ್. ಎಸ್. ಎಲ್. ಸಿ. ಎಂದು ಇಟ್ಟಿದ್ದೆವು. ಈ ಅರ್ಹತೆ ಇರುವವರಿಗೆ 65 ರೂಪಾಯಿ ಬಹಳ ಕಡಮೆ. ಆದುದರಿಂದ ಕನ್ನಡದಲ್ಲಿ ಚೆನ್ನಾಗಿ ಓದು ಬರಹ ಬರುವವರನ್ನು, ಎಲ್. ಎಸ್. ಪಾಸಾಗಿದ್ದರೆ ನೇಮಿಸಿಕೊಳ್ಳಬೇಕೆಂದು ಮಾಡಿರುವುದರಿಂದ ಈಗ ಸಾಕಷ್ಟು ಜನರು ಸಿಕ್ಕುತ್ತಿದ್ದಾರೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಪಂಚಾಯತಿಗಳಿಗೆ ಸೆಕ್ರಟರಿಗಳನ್ನು ನೇಮಕ ಮಾಡಿಲ್ಲ. ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಕಾರಣ ಕಡಮೆ ಸಂಬಳವಲ್ಲ. ನಮಗೆ ಬೇಕಾಗಿರುವ 7,500 ಜನ ಕರಣಿಕರಲ್ಲಿ ಏಳು ಸಾವಿರ ಚಿಲ್ಲರೆ ಜನರನ್ನು ರಿಕ್ರೂಟ್ ಮಾಡಬೇಕು. ಅದರಲ್ಲಿ ಅರ್ಧ ಭಾಗವನ್ನು ತೆಗೆದುಕೊಂಡು ಅವರಿಗೆ ಟ್ರೈನಿಂಗ್ ಕೊಡುವುದರೊಳಗೆ ಹೈಕೋರ್ಟಿನಲ್ಲಿ ರಿಟ್ ಅರ್ಜಿ ದಾಖಲಾಗಿ ಶಾನುಭೋಗರು ಮತ್ತು ಪಟೇಲರ ಜಾಗ ಖಾಲಿಯಾಗಲಿಲ್ಲ. ಆದುದರಿಂದ ರಿಕ್ರೂಟ್ ಮಾಡುವುದನ್ನು ನಿಲ್ಲಿಸಿದ್ದೇವೆ. ಮೊದಲು ತೆಗೆದುಕೊಂಡವರಿಗೆ ನುಮ್ಮನೆ ಸಂಬಳ ಕೊಡಬಾರದೆಂದು ಪಂಚಾಯತಿಗಳಿಗೆ ಕಾರ್ಯದರ್ಶಿಗಳಾಗಿ ಕೆಲಸ ಮಾಡಲು ಹಾಕಿದ್ದೇವೆ.